RNU AIR DHARWAD

OCTOBER 29, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಕಬ್ಬು ಬೆಳೆಗಾರರು ಹಾಗೂ ಸಕ್ಕರೆ ಕಾರ್ಖಾನೆಗಳ ಮಾಲೀಕರ ಸಮಸ್ಯೆ ಆಲಿಸಲು, ಕೇಂದ್ರ ನೀತಿ ಆಯೋಗದ ಸದಸ್ಯ, ಡಾಕ್ಟರ್ ರಮೇಶ ಚಾಂದ ನೇತೃತ್ವದ ಉನ್ನತ ಮಟ್ಟದ ಅಧಿಕಾರಿಗಳ, ಜಂಟಿ ಸಮಿತಿ, ಇಂದು ರಾಜ್ಯಕ್ಕೆ ಭೇಟಿ ನೀಡಲಿದ್ದು, ಇಂದು ಮತ್ತು ನಾಳೆ, ಬೆಂಗಳೂರಿನಲ್ಲಿ ಮಹತ್ವದ ಸಭೆ ನಡೆಯಲಿದೆ. ಕೇಂದ್ರ ಸಕ್ಕರೆ ನಿರ್ದೇಶನಾಲಯದ ನಿರ್ದೇಶಕ, ಅರವಿಂದಕುಮಾರ ರಾವತ್, ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ.

<><><>

ಇಂದು ಬೆಳಗ್ಗೆ ಕರ್ನಾಟಕ ಕಬ್ಬು ಬೆಳೆಗಾರರ ಪ್ರತಿನಿಧಿಗಳೊಂದಿಗೆ, ಮೊದಲ ಸಭೆ ಆಯೋಜಿತವಾಗಿದೆ.

<><><>

ಇಂದು ಸಂಜೆ 4.30 ರಿಂದ 5.30ರ ವರೆಗೆ, ಬೆಳಗಾವಿಯ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ನಿರ್ದೇಶಕರು, ಕೃಷಿ ಅರ್ಥಶಾಸ್ತ್ರಜ್ಞರೊಂದಿಗೆ, ಕೇಂದ್ರ ತಂಡ ಸಮಾಲೋಚಿಸಲಿದೆ.

<><><>

ಇಂದು ಬೆಳಗ್ಗೆ, ಬೆಳಗಾವಿ ಕೃಷಿ ಉತ್ಪನ್ನ ಮಾರುಕಟ್ಟೆಗೆ ಭೇಟಿ ನೀಡಿದ, ಉಪ ಲೋಕಾಯುಕ್ತ, ನ್ಯಾಯಮೂರ್ತಿ, ಬಿ.ವೀರಪ್ಪ, ರೈತರ ತರಕಾರಿ ಉತ್ಪನ್ನಗಳ, ಖರೀದಿ ಮತ್ತು ವಿಲೇವಾರಿಯಲ್ಲಿ, ಪಾರದರ್ಶಕತೆ ಕೊರತೆ, ಸೂಕ್ತ ರಸೀದಿ ಇಲ್ಲದಿರುವುದು ಹಾಗೂ ತೂಕದ ದಾಖಲೆಗಳಿಲ್ಲದೆ, ವಹಿವಾಟು ನಡೆಸುತ್ತಿರುವುದು ಗಮನಿಸಿ, ಕಾನೂನು ಕ್ರಮ ಕೈಗೊಳ್ಳುವುದಾಗಿ, ತಿಳಿಸಿದರು.

<><><>

ಅರಣ್ಯ ನಿರ್ವಹಣೆಯಲ್ಲಿ ಅಂತರಗಳ ನಿವಾರಣೆ: 2035ರ ವರೆಗೆ ಸಂಶೋಧನಾ ಪ್ರಾಧಾನ್ಯತೆಗಳು, ಕಿರುಹೊತ್ತಿಗೆಯನ್ನು, ಪರಿಸರ ಖಾತೆ ಸಚಿವ ರಾಮಲಿಂಗಾರೆಡ್ಡಿ, ಬೆಂಗಳೂರಿನಲ್ಲಿ ಲೋಕಾರ್ಪಣೆಗೊಳಿಸಿದರು. ಜೀವ ವೈವಿಧ್ಯ ರಕ್ಷಣೆ ಮತ್ತು ಅರಣ್ಯ ನಿರ್ವಹಣೆಯಲ್ಲಿ ವೈಜ್ಞಾನಿಕ ಸಂಶೋಧನೆಗಳನ್ನು ಅಳವಡಿಸಿಕೊಳ್ಳಲು, ಈ ಹೊತ್ತಿಗೆ ಮಾರ್ಗದರ್ಶಿಯಾಗಲಿದೆ ಎಂದರು.

<><><>

ಧಾರವಾಡದ ಜೆ.ಎಸ್.ಎಸ್. ಬನಶಂಕರಿ ಕಲಾ, ವಾಣಿಜ್ಯ ಹಾಗೂ ಶಾಂತಿಕುಮಾರ ಗುಬ್ಬಿ ವಿಜ್ಞಾನ ಕಾಲೇಜಿನಲ್ಲಿ, ನಾಡಿದ್ದು 31 ರಂದು, ವ್ಯವಹಾರದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಭಾರತದ ಆರ್ಥಿಕ ಪರಿವರ್ತನೆ – ಅವಕಾಶಗಳು ಮತ್ತು ಸವಾಲುಗಳು ಮತ್ತು ಮುಂದಿನ ದಾರಿ, ವಿಷಯದ ಕುರಿತು, ರಾಷ್ಟ್ರೀಯ ವಿಚಾರ ಸಂಕಿರಣ ನಡೆಯಲಿದೆ. ಗೋವಾದ, ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆಂಡ್ ಸೈನ್ಸ್ಸ್ ಪ್ರಾಧ್ಯಾಪಕ, ಡಾಕ್ಟರ್ ದೇಬಾಸಿಸ್ ಪಟ್ನಾಯಕ್, ಆಶಯ ನುಡಿಗಳನ್ನಾಡುವರು ಎಂದು, ಆಡಳಿತಾಧಿಕಾರಿ, ಅರಿಹಂತ ಪ್ರಸಾದ ತಿಳಿಸಿದ್ದಾರೆ.

<><><>

ಕನ್ನಡ ಕಲಾಲೋಕದಲ್ಲಿ, ತಮ್ಮದೇ ಛಾಪು ಮೂಡಿಸಿದ್ದ, ಕರ್ನಾಟಕ ರತ್ನ, ಪುನೀತ ರಾಜಕುಮಾರ ಅವರ, ಪುಣ್ಯತಿಥಿ ಇಂದು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ತಮ್ಮ ಶ್ರದ್ಧಾ ಸುಮನ ಸಲ್ಲಿಸಿ, ನಟ ಪುನೀತ, ವಿಶಿ ್ಟ ಅಭಿನಯ, ಸರಳ ವ್ಯಕ್ತಿತ್ವ ಹಾಗೂ ಸಮಾಜಮುಖಿ ಸೇವಾ ಕಾರ್ಯಗಳ ಮೂಲಕ, ಕನ್ನಡಿಗರ ಹೃದಯದಲ್ಲಿ ಅಜರಾಮರ, ಎಂದಿದ್ದಾರೆ.

<><><>

ಖ್ಯಾತ ಸಿತಾರ ವಾದಕ, ಧಾರವಾಡ ಘರಾಣೆಯ, ಉಸ್ತಾದ್ ಹಮೀದ ಖಾನ್ ಅವರ, 6ನೇ ಪುಣ್ಯಸ್ಮರಣೆ ಅಂಗವಾಗಿ, ಪುಣೆಯ ಖ್ಯಾತ ಹಿಂದೂಸ್ಥಾನಿ ಗಾಯಕ, ವಿಜಯ ಕೋಪರಕರ ಅವರಿಗೆ, ಸಂಗೀತ ಸಾಧಕ ಪ್ರಶಸ್ತಿಯನ್ನು, ನಾಡಿದ್ದು, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಗಣ್ಯರು ಪ್ರದಾನಿಸಲಿದ್ದಾರೆ.

<><><>

ನವೆಂಬರ್ 1, ಕನ್ನಡ ರಾಜ್ಯೋತ್ಸವ ಸಂಭ್ರಮದ ಹಿನ್ನೆಲೆ, ಇದೇ ಮೊದಲ ಬಾರಿಗೆ, ಕರ್ನಾಟಕ ರಾಜ್ಯೋತ್ಸವ ಪಕ್ಷಿ ಗಣತಿ –2026, ನಾಳೆಯಿಂದ, ನವೆಂಬರ್ 2ನೇ ತಾರೀಖಿನ ವರೆಗೆ, ರಾಜ್ಯಾದ್ಯಂತ ನಡೆಯಲಿದೆ.

<><><>

ಮಡಿಕೇರಿ ವ್ಯಾಪ್ತಿಯ, ತಲಕಾವೇರಿ ವನ್ಯಧಾಮವನ್ನು, ಅಕ್ರಮವಾಗಿ ಪ್ರವೇಶಿಸಿದ್ದ, 8 ಜನ ಆರೋಪಿಗಳನ್ನು, ಅರಣ್ಯ ಇಲಾಖೆ ಅಧಿಕಾರಿಗಳು, ಭಾಗಮಂಡಲ ವ್ಯಾಪ್ತಿಯಲ್ಲಿ ಬಂಧಿಸಿದ್ದಾರೆ. ಕಾಡಿನಲ್ಲಿ ಕೇಳಿ ಬಂದ, ಗುಂಡಿನ ಸದ್ದು ಆಧರಿಸಿ, ಈ ಕಾರ್ಯಾಚರಣೆ ಕೈಗೊಳ್ಳಲಾಯಿತು ಎಂದು, ವಲಯ ಅರಣ್ಯ ಸಂರಕ್ಷಣಾಧಿಕಾರಿ, ತ್ಯಾಗರಾಜ, ತಿಳಿಸಿದ್ದಾರೆ.

<><><>

ಇಂದು, ವಿಶ್ವ ಪಾರ್ಶ್ವವಾಯು ಜನ ಜಾಗೃತಿ ಹಾಗೂ ವಿಶ್ವ ಸೋರಿಯಾಸಿಸ್ ಜಾಗೃತಿ ದಿನ. ಸೋರಿಯಾಸಿಸ್ ಸಾಂಕ್ರಾಮಿಕವಲ್ಲ. ಇದು ಆನುವಂಶಿಕ ಪ್ರವೃತ್ತಿ ಮತ್ತು ರೋಗನಿರೋಧಕ ವ್ಯವಸ್ಥೆಗೆ ಸಂಬಂಧಿಸಿದ, ಉರಿಯೂತದ ಕಾಯಿಲೆ. ಪಾರ್ಶ್ವವಾಯು ಹಾಗೂ ಸೋರಿಯಾಸಿಸ್ ಕಾಯಿಲೆಯಿಂದ ಬಳಲುವವರಿಗೆ, ಖಿನ್ನತೆ ಬಾಧಿಸಬಾರದು; ಸೂಕ್ತ ಚಿಕಿತ್ಸೆಯನ್ನು, ಸಕಾಲಿಕವಾಗಿ ಪಡೆಯಬೇಕು ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಾಗೃತಿ ಮೂಡಿಸುತ್ತಿದೆ.

<><><>

ನೆಟ್ಟಕಲ್ಲಪ್ಪ 5ನೇ ಆವೃತ್ತಿಯ, ಈಜು ಚಾಂಪಿಯನ್‌ಶಿಪ್, ನಾಡಿದ್ದು 31ನೇ ತಾರೀಖಿನಿಂದ, ಎರಡು ದಿನಗಳ ಕಾಲ, ಬೆಂಗಳೂರಿನ, ಪದ್ಮನಾಭನಗರದ, ನೆಟ್ಟಕಲ್ಲಪ್ಪ ಅಕ್ವಾಟಿಕ್ ಕೇಂದ್ರದಲ್ಲಿ, ನಡೆಯಲಿದೆ. ಕರ್ನಾಟಕ ಸೇರಿದಂತೆ, 8 ರಾಜ್ಯಗಳಿಂದ, ಒಟ್ಟು 350 ಈಜುಪಟುಗಳು, ಭಾಗವಹಿಸಲಿದ್ದಾರೆ. ಭಾರತೀಯ ಈಜು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಮೊನಾಲ್ ಚೋಕ್ಸಿ, ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಒಲಿಂಪಿಯನ್ ಶ್ರೀಹರಿ ನಟರಾಜ ಹಾಗೂ ಸಜನ್ ಪ್ರಕಾಶ ಅವರು, ಸ್ಪರ್ಧಿಸಲಿದ್ದಾರೆ.

<><><>

ಚೆನ್ನೈನಲ್ಲಿ ನಡೆದ, 41ನೇ ಕಿರಿಯರ ಅಥ್ಲೆಟಿಕ್ಸ್‌ನಲ್ಲಿ, ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲೂಕು ರಿಪ್ಪನ್‌ಪೇಟೆಯ, ಎಸ್.ಆರ್. ಆಯು ್, 20 ವರ್ಷದೊಳಗಿನವರ ವಿಭಾಗದ, 400 ಮೀಟರ್ ರಿಲೇ ಓಟದಲ್ಲಿ, ಪ್ರಥಮ ಸ್ಥಾನ ಪಡೆದು, ಚಿನ್ನದ ಪದಕ ಗೆದ್ದಿದ್ದಾರೆ. ವಯಕ್ತಿಕ 200 ಮೀಟರ್ ಓಟದಲ್ಲಿ ಸಹ, ದ್ವಿತೀಯ ಸ್ಥಾನ ಗಳಿಸಿ, ಬೆಳ್ಳಿ ಪದಕ ಮುಡಿಗೇರಿಸಿಕೊಂಡಿದ್ದಾರೆ. ಬೆಂಗಳೂರಿನ ಕಂಠೀರವ ಕ್ರೀಡಾಂಗಣದ, DYES ವಸತಿನಿಲಯದ ತರಬೇತುದಾರ, ಅಶೋಕ ಮಂಟೂರ ತರಬೇತಿ ನೀಡುತ್ತಿದ್ದಾರೆ.

<><><>

ಕರ್ನಾಟಕ ಬಾಲಕಿಯರ, ಬಾಸ್ಕೆಟ್‌ಬಾಲ್ ತಂಡ, ಪುಣೆಯಲ್ಲಿ ನಡೆಯುತ್ತಿರುವ, 41ನೇ ರಾಷ್ಟ್ರೀಯ ಬಾಸ್ಕೆಟ್‌ಬಾಲ್ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನ, ಬಿ ಗುಂಪಿನ ಪಂದ್ಯದಲ್ಲಿ, ಉತ್ತರ ಪ್ರದೇಶ ತಂಡವನ್ನು, 63–47 ಪಾಯಿಂಟ್ಸ್‌ಗಳಲ್ಲಿ, 16 ಅಂಕಗಳ ಅಂತರದಲ್ಲಿ, ಪರಾಭವಗೊಳಿಸಿತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ **1** ಗಂಟೆ **10** ನಿಮಿಷಕ್ಕೆ.